ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 11-07-1971.

*ವಿಶ್ವಕಲ್ಯಾಣಕಾರಿಯಾಗಲು ಮುಖ್ಯ ಧಾರಣೆಗಳು* (विश्व-कल्याणकारी बनने के लिए मुख्य धारणाएं)

ಇಂದಿನ ಈ ಸಂಘಟನೆಯನ್ನು ಯಾವ ಸಂಘಟನೆ ಎಂದು ಹೇಳಬೇಕು? ಗುಜರಾತಿನ ಸಂಘಟನೆಯೇ? ನಿಮ್ಮನ್ನು ನೀವು ಗುಜರಾತಿನವರು ಎಂದು ತಿಳಿಯುತ್ತಿಲ್ಲ ತಾನೇ? ಯಾವ ರೀತಿ ತಂದೆ ಬೇಹದ್ದಿನ ಮಾಲೀಕರಾಗಿದ್ದಾರೆಯೋ ಅದೇ ರೀತಿ ಎಲ್ಲಿಯೇ ನಿಮಿತ್ತರಾಗಿರಲಿ ಆದರೆ ವಿಶ್ವಕಲ್ಯಾಣಕಾರಿ ಆಗಿರುವಿರಿ. ದೃಷ್ಟಿ, ವೃತ್ತಿ ಅಥವಾ ಸ್ಮೃತಿಯಲ್ಲಿ ವಿಶ್ವಕಲ್ಯಾಣಕಾರಿಯ ಭಾವನೆ ಸದಾ ಇರುತ್ತದೆಯೇ ಅಥವಾ ಗುಜರಾತಿನ ಕಲ್ಯಾಣದ ಭಾವನೆ ಸದಾ ಇರುತ್ತದೆಯೇ? ಗುಜರಾತಿನಲ್ಲಿದ್ದರೂ ವಿಶ್ವದ ಕಡೆ ಲಕ್ಷ್ಯ ಇರುತ್ತದೆಯಲ್ಲವೆ? ಬೇಹದ್ದಿನ ಸೇವೆಯಲ್ಲಿರುವಿರಿ ಅಲ್ಲವೆ? ಇದು ನಿಮಿತ್ತ ಕರ್ತವ್ಯ ಕೊಡಲಾಗಿದೆ. ಅದನ್ನು ನಿಮಿತ್ತರಾಗಿ ಮಾಡುತ್ತಿರುವಿರಿ. ಆದರೆ ನಶೆ ಏನಿರುತ್ತದೆ? ನಾವು ವಿಶ್ವ ಕಲ್ಯಾಣಕಾರಿ ಎಂದು ವರ್ಣನೆ ಮಡುತ್ತೀರಿ ಅಲ್ಲವೆ? ವಿಶ್ವ ಪರಿವರ್ತನೆ ಮಾಡಬೇಕು. ಯಾವ ಸೇವೆ ಮಾಡುತ್ತೀರಿ ಅಥವಾ ಸೇವೆಯ ಸಾಧನಗಳನ್ನು ತಯಾರು ಮಾಡುತ್ತೀರೋ ಅದರಲ್ಲಿ ವಿಶ್ವ ಎನ್ನುವ ಶಬ್ದ ಬರುತ್ತದೆಯಲ್ಲವೆ. ವಿಶ್ವದ ನವನಿರ್ಮಾಣ ಮಾಡುವವರಾಗಿರುವಿರಿ. ವಿಶ್ವದ ಪರಿವರ್ತನೆ ಆಗುತ್ತದೆ. ಒಂದು ಸ್ಥಾನದಲ್ಲಿ ಧ್ವನಿ ಬರುತ್ತದೆ ಆದರೆ ಅದು ನಾಲ್ಕೂ ಕಡೆ ಹರಡುತ್ತದೆ. ಒಂದು ಸ್ಥಾನದಲ್ಲಿ ನಿಮಿತ್ತರಾಗಿ ಧ್ವನಿ ಮೊಳಗಿಸುತ್ತೀರಿ. ಆದರೆ ಹರಡುವುದು ನಾಲ್ಕೂ ಕಡೆಯಲ್ಲವೆ. ಆದ್ದರಿಂದ ವಿಶ್ವ ಕಲ್ಯಾಣಕಾರಿ ಆಗಲು ಎರಡು ಮುಖ್ಯ ಧಾರಣೆಗಳು ಅವಶ್ಯವಾಗಿವೆ. ಇದರಿಂದ ಸೀಮಿತ ಸ್ಥಾನದಲ್ಲಿದ್ದರೂ ಸಹ ಬೇಹದ್ದಿನ ಕಲ್ಯಾಣಕಾರಿಯಾಗಲು ಸಾಧ್ಯ. ಈ ಧಾರಣೆಯಿಲ್ಲದಿದ್ದರೆ ಅವರ ಧ್ವನಿ, ಅವರ ದೃಷ್ಟಿ ಬೇಹದ್ದಿನ ವಿಶ್ವದಲ್ಲಿ ತಲುಪಲು ಸಾಧ್ಯವಿಲ್ಲ ವಿಶ್ವ ಕಲ್ಯಾಣಕಾರಿ ಆಗಲು ಯಾವ ಎರಡು ಧಾರಣೆ ಬೇಕು? ನೀವು ಯಾವ ಎರಡು ಧಾರಣೆಯ ಆಧಾರದಿಂದ ವಿಶ್ವ ಕಲ್ಯಾಣದ ಕರ್ತವ್ಯ ಮಾಡುತ್ತೀರಿ? ವಿಶ್ವ ಕಲ್ಯಾಣದ ಯಾವ ಶುಭ ಭಾವನೆ ಇದೆ? ಅದರ ಪ್ರತ್ಯಕ್ಷ ಫಲ ಖಂಡಿತವಾಗಿಯೂ ಸಿಗುತ್ತದೆ. ಭಾವನೆಯ ಫಲ ಭಕ್ತಿಮಾರ್ಗದಲ್ಲಿಯೂ ಸಿಗುತ್ತದೆ. ಆದರೆ ಅದು ಅಲ್ಪ ಕಾಲಕ್ಕಾಗಿ, ಇದು ಸದಾ ಕಾಲ ಸಿಗುತ್ತದೆ. ಆ ಪ್ರತ್ಯಕ್ಷ ಫಲದ ಪ್ರಾಪ್ತಿಗಾಗಿ ಮುಖ್ಯ ಎರಡು ಧಾರಣೆಗಳು ಯಾವುವು? ಆ ಧಾರಣೆ ಇಲ್ಲದೆ ತಮ್ಮ ಮತ್ತು ಸೇವೆಯ ಉನ್ನತಿ ಆಗುವುದಿಲ್ಲ. ಅದನ್ನು ಮಾಡುತ್ತಿರುವಿರಿ ಮತ್ತು ಮಾಡಲೇ ಬೇಕಾಗಿದೆ. ಮಾಡೋಣ ಎನ್ನುವ ಮಾತೂ ಇಲ್ಲ. ಮಾಡಲೇ ಬೇಕು. ಮುಖ್ಯ ಎರಡು ಧಾರಣೆಗಳು ಈಶ್ವರೀಯ ನಶೆ ಮತ್ತು ಜೊತೆಯಲ್ಲಿ ದಯೆ, ನಶೆ ಮತ್ತು ದಯೆ ಎರಡೂ ಜೊತೆ ಜೊತೆಯಲ್ಲಿದ್ದಾಗ ಮತ್ತು ಸಮಾನವಾಗಿದ್ದಾಗ, ಎರಡೂ ಗುಣಗಳ ಸಮಾನತೆಯಿಂದ ಆತ್ಮಿಕತೆಯ ಸ್ಥಿತಿ ನಿರ್ಮಾಣ ಆಗುತ್ತದೆ. ಇದಕ್ಕೆ ಆತ್ಮಿಕತೆ ಅಥವಾ ಅತ್ಮಿಕ ಸ್ಥಿತಿ ಎಂದು ಹೇಳುತ್ತಾರೆ. ನಶೆಯೂ ಪೂರ್ಣ ಇರಬೇಕು ಮತ್ತು ದಯೆಯೂ ಪೂರ್ಣ ಇರಬೇಕು. ಈಗ ನಶೆಯನ್ನು ಬಿಟ್ಟು ಕೇವಲ ದಯೆ ತೋರಿಸುತ್ತಿದ್ದೀರಿ ಅಥವಾ ದಯೆಯನ್ನು ಬಿಟ್ಟು ನಶೆ ಇಟ್ಟುಕೊಳ್ಳುತ್ತೀರಿ, ಆದ್ದರಿಂದ ಎರಡರ ಸಮಾನತೆಯಿಂದ ಆಗುವ ಆತ್ಮಿಕ ಸ್ಥಿತಿಯ ಕೊರತೆ ಆಗುತ್ತದೆ. ಆದ್ದರಿಂದ ಸದಾ ಯಾವ ಕರ್ತವ್ಯ ಮಾಡುತ್ತಿದ್ದರೂ ಅಥವಾ ಮುಖದಿಂದ ಏನೇ ವರ್ಣನೆ ಮಾಡುತ್ತೀದ್ದರೂ ಅದರಲ್ಲಿ ನಶೆ ಮತ್ತು ದಯೆ ಎರಡೂ ಸಮಾನವಾಗಿದೆಯೇ? ಎಂದು ಪರಿಶೀಲನೆ ಮಾಡಿಕೊಳ್ಳಿರಿ. ಎರಡನ್ನೂ ಸಮಾನ ಮಾಡುವುದರಿಂದ ಒಂದು ನಿಮ್ಮ ಸ್ವಮಾನವನ್ನು ಸ್ವಯಂ ಇಟ್ಟುಕೊಳ್ಳಲು ಸಾಧ್ಯ ಇನ್ನೊಂದು ಸರ್ವಾತ್ಮರಿಂದ ಸ್ವಮಾನದ ಪ್ರಾಪ್ತಿಯೂ ಆಗುತ್ತದೆ. ಸ್ವಮಾನವನ್ನು ಬಿಟ್ಟು ಮಾನ ಸಿಗಬೇಕು ಎಂದು ಇಚ್ಛೆ ಪಟ್ಟರೆ ಸಫಲತೆ ಸಿಗುವುದಿಲ್ಲ. ಮಾನದ ಇಚ್ಛೆಯನ್ನು ಬಿಟ್ಟು ಸ್ವಮಾನದಲ್ಲಿರಿ ಆಗ ಮಾನ ನೆರಳಿನಂತೆ ನಿಮ್ಮ ಹಿಂದೆ ಬರುತ್ತದೆ. ಯಾವ ರೀತಿ ಭಕ್ತರು ತಮ್ಮ ದೇವಿ ದೇವತೆಯರ ಹಿಂದೆ ಅಂಧ ಶ್ರದ್ಧೆಯಿಂದ ಓಡೋಡಿ ಬರುತ್ತಾರೆಯೋ ಹಾಗೆ ಚೈತನ್ಯ ಸ್ವರೂಪದಲ್ಲಿ ಸ್ವಮಾನದಲ್ಲಿ ಸ್ಥಿತರಾಗಿರುವ ನಿಮ್ಮ ಹಿಂದೆ ಸರ್ವ ಆತ್ಮರು ಗೌರವ ಕೊಡಲು ಬರುತ್ತಾರೆ, ಓಡುತ್ತಾರೆ. ಭಕ್ತರ ಓಡಾಟವನ್ನು ನೋಡಿರುವಿರಿ ಅಲ್ಲವೆ? ನಿಮ್ಮ ನೆನಪಾರ್ಥವಾಗಿ ಜಡ ಚಿತ್ರಗಳಿವೆ. ಅದರಲ್ಲಿಯೂ ಚಿತ್ರಕಾರರು ಒಂದು ಕಡೆ ಶಕ್ತಿಯರ ನಶೆ ಮತ್ತು ಇನ್ನೊಂದು ಕಡೆ ದಯೆಯನ್ನು ಮುಖ್ಯ ಧಾರಣೆಯನ್ನಾಗಿ ಚಿತ್ರಿಸಿದ್ದಾರೆ. ಒಂದೇಚಿತ್ರದಲ್ಲಿ

ಎರಡೂ ಭಾವವನ್ನು ಪ್ರಕಟ ಮಾಡಿದ್ದಾರೆ. ಏಕೆ ಮಾಡಿದ್ದಾರೆ? ಏಕೆಂದರೆ, ಪ್ರ್ಯಾಕ್ಟಿಕಲ್‌ನಲ್ಲಿ ನೀವು ನಶೆ ಮತ್ತು ದಯಾಹೃದಯಮೂರ್ತಿ ಆಗಿರುವ ಕಾರಣ ಜಡ ಚಿತ್ರದಲ್ಲಿಯೂ ಇವೆ ಮುಖ್ಯ ಧಾರಣೆಯನ್ನಾಗಿ ತೋರಿಸಿದ್ದಾರೆ. ಈಗ ನೀವು ಸೇವೆಯಲ್ಲಿರುವಿರಿ ಆದ್ದರಿಂದ ಸೇವೆಯಲ್ಲಿ ಸಫಲತೆಯೂ ಈ ಎರಡು ಮುಖ್ಯ ಧಾರಣೆಯ ಆಧಾರದ ಮೇಲಿದೆ. ದಯಾ ಹೃದಯಿ ಸಹ ಅವಶ್ಯ ಆಗಬೇಕು. ಆದರೆ ಯಾವ ಆಧಾರದ ಮೇಲೆ ಮತ್ತು ಯಾವಾಗ? ಇದನ್ನೂ ಸಹ ನೋಡಬೇಕು. ನಶೆ ಇರಬೇಕಾಗಿರುವುದು ಅವಶ್ಯ. ಆದರೆ ಹೇಗೆ ಮತ್ತು ಯಾವ ರೀತಿಯಿಂದ ಪ್ರತ್ಯಕ್ಷ ಮಾಡಬೇಕು. ಇದನ್ನೂ ನೋಡಬೇಕು. ನಶೆ ವರ್ಣನೆ ಮಾಡುವುದರಿಂದ ಅಥವಾ ತೋರಿಸುವುದರಿಂದ ಕಾಣುವುದಿಲ್ಲ. ನಶೆ ಹಾವ ಭಾವದಿಂದ ಸ್ವಯಂ ತನ್ನ ಸಾಕ್ಷಾತ್ಕಾರ ಮಾಡಿಸುತ್ತದೆ. ಅದರ ವರ್ಣನೆ ಮಾಡಿದರೆ ನಶೆ ಬದಲಾಗಿ ದರ್ಪ ಎನಿಸುತ್ತದೆ. ದರ್ಪ ತೋರಿಸಬಾರದು. ಆತ್ಮಿಕ ನಶೆಯಲ್ಲಿರಬೇಕು.

ದರ್ಪ ಅಥವಾ ಅಹಂಕಾರ ಕ್ರೋಧದ ವಂಶಾವಳಿ ಎನಿಸಿಕೊಳ್ಳುತ್ತದೆ. ಆದ್ದರಿಂದ ದರ್ಪ ತೋರಿಸಬಾರದು. ಆದರೆ ನಶೆ ಅವಶ್ಯ ಇರಬೇಕು. ಎಷ್ಟು ದಯಾಹೃಯಿ ಮತ್ತು ನಶೆಯಲ್ಲಿರುತ್ತೀರೋ ಆಗ ದರ್ಪ ಸಮಾಪ್ತಿ ಆಗುತ್ತದೆ. ಯಾರು ಎಂತಹ ಆತ್ಮವೇ ಇರಲಿ ದರ್ಪ ಇರುವ ಆತ್ಮವೇ ಇರಲಿ, ನಶೆ ಮತ್ತು ದಯಾಹೃದಯಿ ಆಗುವುದರಿಂದ ದರ್ಪದಲ್ಲಿ ಎಂದೂ ಬರುವುದಿಲ್ಲ. ಪರಿಸ್ಥಿತಿ ಹೀಗಿತ್ತು ಅಥವಾ ಅವರು ಅಂತಹ ಮಾತು ಆಡಿದರು ಆದ್ದರಿಂದ ಹೀಗೆ ಮಾಡಬೇಕಾಯಿತು ಎಂದು ಹೇಳುವುದಲ್ಲ. ಮಾಡಲೇ ಬೇಕಾಗುತ್ತದೆ. ಇದಂತೂ ಆಗುತ್ತದೆ, ಇನ್ನೂ ಸಂಪೂರ್ಣ ಆಗಿಲ್ಲವಲ್ಲ ಎಂದು ಹೇಳುವುದಲ್ಲ. ಇಂತಹ ಶಬ್ದ ಅಥವಾ ಭಾಷೆ ಈ ಸಂಘಟನೆಯಲ್ಲಿರಬಾರದು ಏಕೆಂದರೆ ನೀವು ಸೇವೆಗೆ ನಿಮಿತ್ತರಾಗಿದ್ದೀರಿ ಆದ್ದರಿಂದ ಈ ಸಂಘಟನೆಗೆ ಮಾಸ್ಟರ್ ಜ್ಞಾನಪೂರ್ಣ ಮತ್ತು ಸೇವಾಧಾರಿ, ಸಫಲತಾಪೂರ್ಣ ಸಂಘಟನೆ ಎಂದು ಹೇಳುತ್ತೇವೆ. ಯಾರು ಸಫಲತಾಪೂರ್ಣರಾಗಿದ್ದಾರೆಯೋ ಅವರು ಯಾವುದೇ ಕಾರಣ ಹೇಳುವುದಿಲ್ಲ. ಅವರು ಕಾರಣವನ್ನು ನಿವಾರಣೆಯಲ್ಲಿ ಪರಿವರ್ತನೆಮಾಡುತ್ತಾರೆ. ಕಾರಣವನ್ನು ಮುಂದಿಡುವುದಿಲ್ಲ. ಮಾಸ್ಟರ್ ಜ್ಞಾನಪೂರ್ಣ, ಸಫಲತಾ ಸಂಪನ್ನ ಆತ್ಮರು ಯಾವುದೇ ಕಾರಣದ ಮೇಲೆ ಸಫಲ ಆಗಲು ಸಾಧ್ಯವಿಲ್ಲವೇ? ಯಾರು ಮಾಸ್ಟರ್ ಜ್ಞಾನಪೂರ್ಣ, ಸಫಲತಾ ಸಂಪನ್ನ ಆಗಿರುತ್ತಾರೆಯೋ ಅವರು ತಮ್ಮ ಜ್ಞಾನದ ಶಕ್ತಿಯಿಂದ ಕಾರಣವನ್ನು ನಿವಾರಣೆಯಲ್ಲಿ ಪರಿವರ್ತನೆ ಮಾಡುತ್ತಾರೆ. ಆಗ ಕಾರಣ ಸಮಾಪ್ತಿ ಆಗುತ್ತದೆ. ನಿಮಿತ್ತ ಆದವರು ತಮ್ಮ ಪ್ರತಿಯೊಂದು ಸಂಕಲ್ಪದ ಪ್ರತಿ ಎಚ್ಚರಿಕೆಯಿಂದ ಇರಬೇಕು. ಏಕೆಂದರೆ ನಿಮಿತ್ತ ಆಗಿರುವ ಆತ್ಮರ ಮೇಲೆ ಎಲ್ಲರ ದೃಷ್ಟಿ ಇರುತ್ತದೆ. ನಿಮಿತ್ತ ಆದವರು ಕಾರಣ ಕೊಡುತ್ತಿದ್ದರೆ ನಿಮ್ಮನ್ನು ನೋಡಿ ಮುಂದುವರೆಯುವಂತಹ ಬೇರೆಯವರು ಏನು ಉತ್ತರ ಕೊಡುತ್ತಾರೆ? ಈ ಕಾರಣದಿಂದಾಗಿ ನಾವು ಬರಲು ಸಾಧ್ಯವಾಗುವುದಿಲ್ಲ. ನಡೆಯಲು ಸಾಧ್ಯವಿಲ್ಲ. ಯಾವಾಗ ಸ್ವಯಂ ಕಾರಣವನ್ನು ಹೇಳುವವರಾದರೆ ಬೇರೆಯವರ ಕಾರಣವನ್ನು ಹೇಗೆ ನಿವಾರಣೆ ಮಾಡುತ್ತೀರಿ? ಏಕೆಂದರೆ ಜನರು ಎಲ್ಲವನ್ನು ಅರಿತವರಾಗಿದ್ದಾರೆ. ಹೇಗೆ ನೀವು ಇಲ್ಲಿ ದಿನಪ್ರತಿದಿನ ಜ್ಞಾನಪೂರ್ಣರಾಗುತ್ತೀರೋ ಅದೇ ರೀತಿ ಜಗತ್ತಿನ ಜನರು ವಿಜ್ಞಾನದ ಶಕ್ತಿಯಿಂದ, ವಿಜ್ಞಾನದ ರೀತಿಯಲ್ಲಿ ಜ್ಞಾನಪೂರ್ಣರಾಗುತ್ತಾರೆ. ಅವರು ನಿಮ್ಮ ಸಂಕಲ್ಪಗಳನ್ನು ನಿಮ್ಮ ಮಸ್ತಕದಿಂದ, ನಯನಗಳಿಂದ ಚಹರೆಯಿಂದ ಪರಿಶೀಲನೆ ಮಾಡುತ್ತಾರೆ. ಹೇಗೆ ಇಲ್ಲಿ ಜ್ಞಾನದ ಶಕ್ತಿ ತುಂಬುತ್ತದೆ. ಹಾಗೆ ಅಲ್ಲಿಯೂ ವಿಜ್ಞಾನದ ಶಕ್ತಿ ಕಡಿಮೆ ಇಲ್ಲ. ಇಬ್ಬರದೂ ಬಲ ಇದೆ. ನಿಮಿತ್ತ ಆದವರಲ್ಲಿ ಏನಾದರೂ ಕಡಿಮೆ ಇದ್ದರೆ ಅದು ಮುಚ್ಚಿಡಲು ಸಾಧ್ಯವಿಲ್ಲ. ಆದ್ದರಿಂದ ನೀವು ನಿಮಿತ್ತ ಆಗಿರುವ ಆತ್ಮರು ಅಷ್ಟೇ ನಿಮ್ಮ ಸಂಕಲ್ಪ, ವಾಣಿ ಮತ್ತು ಕರ್ಮದ ಬಗ್ಗೆ ಎಚ್ಚರಿಕೆಯಿಂದ ಇರಬೇಕು. ಎಚ್ಚರಿಕೆ ಇಲ್ಲದಿದ್ದರೆ ನಿಮ್ಮ ಚಹರೆಯಲ್ಲಿ ಒತ್ತಡದ ರೇಖೆಗಳು ಕಂಡು ಬರುತ್ತವೆ. ಸ್ಥೂಲ ರೇಖೆಗಳಿಂದ ಜನರು, ಇವರು ಯಾವ ಯಾವ ಭಾಗ್ಯ ರೂಪಿಸುತ್ತಾರೆ ಎನ್ನುವುದನ್ನು ತಿಳಿದುಕೊಳ್ಳುತ್ತಾರೆ ತಾನೆ. ಗಮನ ಇಲ್ಲದಿದ್ದರೆ ಮುಖದಲ್ಲಿ ಒತ್ತಡದ ರೇಖೆಗಳು ಕಾಣಿಸುತ್ತವೆ. ಆ ಮಾಯೆಯ ಜ್ಞಾನಪೂರ್ಣರು ಅರಿತುಕೊಂಡು ಬಿಡುತ್ತಾರೆ, ಅವರು ಕಡಿಮೆ ಇಲ್ಲ. ನೀವು ಕೆಲವು ಬಾರಿ ಹುಡುಗಾಟಿಕೆಯ ಕಾರಣ ಪರೀಕ್ಷೆ ಮಾಡಿಕೊಳ್ಳದೇ ಇರಬಹುದು ಆದರೆ ಆ ಜನರು ಈ ಮಾತಿನಲ್ಲಿ ಬಹಳ ತೀಕ್ಷ್ಣವಾಗಿದ್ದಾರೆ. ಏಕೆಂದರೆ ಅವರ ಕರ್ತವ್ಯವೇ ಇದಾಗಿದೆ ಆದ್ದರಿಂದ ನಿಮಿತ್ತ ಆದವರು ಈ ಜವಾಬ್ದಾರಿ ತೆಗೆದುಕೊಳ್ಳಬೇಕು. ಯಾವುದಾದರೂ ಮಾತು ಕಠಿಣ ಎನಿಸುತ್ತಿದ್ದರೆ ಏನಾದರೂ ಕೊರತೆ ಅವಶ್ಯ ಇದೆ. ನಿಮ್ಮ ಮೇಲೆ ನೀವು ನಿಶ್ಚಯ ಬುದ್ಧಿ ಆಗುವುದರಲ್ಲಿ ಏನಾದರೂ ಕೊರತೆ ತಂದುಕೊಳ್ಳುತ್ತೀರಿ. ಯಾವ ರೀತಿ

ತಂದೆಯಲ್ಲಿ 100 ಪರ್ಸೆಂಟ್ ನಿಶ್ಚಯ ಇದೆ. ಒಂದು ಕಡೆ ನೀವು ನಿಶ್ಚಯ ಬುದ್ಧಿಯಿಂದ ಇರುವಿರಿ ಮತ್ತು ಇನ್ನೊಂದು ಕಡೆ ಇಡೀ ವಿಶ್ವದ ಆತ್ಮರು ಇದ್ದಾರೆ. ಆದರೂ ಇದರಲ್ಲಿ ನೀವು ಏರು ಪೇರು ಆಗಬಾರದು. ಅದೇ ರೀತಿ ದೈವೀ ಅಥವಾ ಈಶ್ವರೀಯ ಆತ್ಮರ ಮೂಲಕ ಅಥವಾ ಜಗತ್ತಿನ ಆತ್ಮರ ಮೂಲಕವೇ ಇರಲಿ ಯಾರಾದರೂ ಏರುಪೇರು ಮಾಡಲು ಕಾರಣವಾಗಿರಲಿ ಆದರೆ ನಿಮ್ಮಲ್ಲಿ ನಿಮಗೆ ನಿಶ್ಚಯ ಬುದ್ಧಿಯ ಕೊರತೆ ಆಗಬಾರದು ಆದ್ದರಿಂದ ನಶೆಯ ಜೊತೆ ದಯೆ ಇರಬೇಕು. ನಶೆ ಒಂದೇ ಅಲ್ಲ, ದಯೆಯೂ ಇರಬೇಕು.

ನಿಶ್ಚಯ ಬುದ್ಧಿಯಾಗಿ ಕಲ್ಯಾಣದ ಭಾವನೆ ಇಡುವುದರಿಂದ ದೃಷ್ಟಿ ಮತ್ತು ವೃತ್ತಿ ಎರಡೂ ಬದಲಾಗುತ್ತದೆ. ಯಾರು ಎಂತಹ ಕ್ರೋಧಿ ಮನುಷ್ಯನೇ ಇರಲಿ, ಅಪಮಾನ ಮಾಡುವವರು ಇರಲಿ, ನಿಂದೆ ಮಾಡುವವರು ಇರಲಿ, ಆದರೆ ಯಾವಾಗ ಕಲ್ಯಾಣದ ಭಾವನೆ ಪ್ರತಿಯೊಬ್ಬ ಆತ್ಮರ ಪ್ರತಿ ಕಲ್ಯಾಣದ ಭಾವನೆ ಇದ್ದರೆ ದರ್ಪ ಬದಲಾಗಿ ದಯ ಆಗುತ್ತದೆ. ಆಗ ಪರಿಣಾಮ ಏನಾಗುತ್ತದೆ? ಅವರನ್ನು ಅಲ್ಲಾಡಿಸಲು ಸಾಧ್ಯವೇ? ಆ ಶುಭ ಕಲ್ಯಾಣದ ಭಾವನೆ ಅವರ ಸಂಸ್ಕಾರವನ್ನು ಪರಿವರ್ತನೆ ಮಾಡುವ ಫಲವನ್ನು ತೋರಿಸುತ್ತದೆ. ಇದು ಅವಶ್ಯ ಆಗುತ್ತದೆ ಕೆಲವು ಬೀಜದಿಂದ ಪ್ರತ್ಯಕ್ಷ ಫಲ ದೊರೆಯುತ್ತದೆ ಇನ್ನು ಕೆಲವು ತಕ್ಷಣ ಪ್ರತ್ಯಕ್ಷ ಫಲ ಕೊಡುವುದಿಲ್ಲ. ಸ್ವಲ್ಪ ಸಮಯ ಹಿಡಿಯುತ್ತದೆ. ಇಂತಹ ಸಮಯದಲ್ಲಿ ಫಲ ಬರುತ್ತಿಲ್ಲ ಎಂದು ಅಧೈರ್ಯ ಆಗಬಾರದು. ಎಲ್ಲಾ ಫಲಗಳು ತಕ್ಷಣ ಸಿಗುವುದಿಲ್ಲ. ಸ್ವಾಭಾವಿಕ ಮಳೆಯಾಗುವುದರಿಂದ ಕೆಲವು ಪ್ರತ್ಯಕ್ಷ ಫಲ ಕೊಡುತ್ತವೆ. ನೀರು ಹಾಕುವುದರಿಂದ ಅಲ್ಲ. ಇದೂ ಸಹ ನಾಟಕದ ನಿಗದಿಯಾಗಿದೆ. ಈಗ ಯಾವ ಅವಿನಾಶಿ ಬೀಜ ಹಾಕುತ್ತಿದ್ದೀರಿ ಕೆಲವು ಪ್ರತ್ಯಕ್ಷ ಫಲ ಕಾಣಿಸುತ್ತದೆ. ಇನ್ನು ಕೆಲವು ಪ್ರಾಕೃತಿಕ ವಿಕೋಪ ಆದಾಗ, ನಾಟಕದ ದೃಶ್ಯ ಬದಲಾಗುವಾಗ, ಆ ಪ್ರಾಕೃತಿಕ ವಾಯುಮಂಡಲ, ವಾತಾವರಣದಿಂದಾಗಿ ಆ ಬೀಜದಿಂದ ಫಲ ಬರುತ್ತದೆ. ವಿನಾಶ ಆಗುತ್ತದೆ, ಇದಂತೂ ಖಚಿತವಾಗಿದೆ. ಬೀಜ ಅವಿನಾಶಿಯಾಗಿರುವಾಗ ಫಲ ಬರದೇ ಇರಲು ಸಾಧ್ಯವಿಲ್ಲ, ಆದರೆ ಕೆಲವರು ಸಮೀಪ ಬರುತ್ತಾರೆ. ಕೆಲವರು ತಡವಾಗಿ ಬರುವವರಿದ್ದಾರೆ ಅಂದ ಮೇಲೆ ಈಗ ಹೇಗೆ ಬರುತ್ತಾರೆ? ಅವರು ತಡವಾಗಿ ಫಲ ಕೊಡುತ್ತಾರೆ ಆದ್ದರಿಂದ ಎಂದೂ ಸೇವೆ ಮಾಡುತ್ತಾ, ಇದು ವ್ಯರ್ಥ ಆಯಿತು ಎಂದು ನೋಡುವುದು ಅಥವಾ ವಿಚಾರ ಮಾಡಬಾರದು. ನಂಬರವಾರಾಗಿ ಸಮಯ ಪ್ರಮಾಣ ಫಲ ಕಂಡು ಬರುತ್ತದೆ.

ಇದು ಸಫಲತಾಪೂರ್ಣ, ಜ್ಞಾನ ಪೂರ್ಣ ಸೇವಾಧಾರಿ ಗುಂಪಾಗಿದೆ. ಈ ಮುದ್ರೆ ಇದೆ. ನಿಮ್ಮ ಈ ಟ್ರೇಡ್ ಮಾರ್ಕನ್ನು ಸದಾ ನೋಡುತ್ತಿರಿ. ತ್ರಿಮೂರ್ತಿ ಮುದ್ರೆ ಹಾಕಿದೆಯಲ್ಲವೆ. ಮತ್ತು ಇದನ್ನೇ ಸ್ಮೃತಿಯಲ್ಲಿಟ್ಟುಕೊಂಡು ಸೇವೆಯ ಪ್ರತಿ ಹೆಜ್ಜೆಯನ್ನು ಪದಮದ ಸಂಪಾದನೆಯಲ್ಲಿ ಪರಿವರ್ತನೆ ಮಾಡುತ್ತಾ ನಡೆಯಬೇಕು. ಇದನ್ನು ಪರಿಶೀಲನೆ ಮಾಡಿಕೊಳ್ಳಿ ಪ್ರತಿ ಹೆಜ್ಜೆಯಲ್ಲಿ ಪದಮದಷ್ಟು ಸಂಪಾದನೆ ಮಾಡಿದೆನೆ? ಪ್ರತಿ ವಚನದಿಂದ, ಪ್ರತಿ ಕರ್ಮದಿಂದ, ಪ್ರತಿ ಹೆಜ್ಜೆಯಿಂದ ಪದಮದಷ್ಟು ಸಂಪಾದನೆ ಜಮಾ ಆಯಿತೆ? ಇಲ್ಲವಾದರೆ ಪ್ರತಿ ಹೆಜ್ಜೆಯಲ್ಲಿ ಪದಮ ಎನ್ನುವ ಈ ಗಾದೆ ಮಾತು ಏಕೆ ಇದೆ? ಪದಮ ಎಂದು ಕಮಲಕ್ಕೂ ಹೇಳುತ್ತಾರೆ. ಹೀಗೆ ಪದ್ಮ ಸಮಾನ ಅಗಿರುವುದರಿಂದ ಪ್ರತಿ ಸಂಕಲ್ಪ ಮತ್ತು ಪ್ರತಿ ಹೆಜ್ಜೆಯಲ್ಲಿ ಪದಮದ ಸಂಪಾದನೆ ಮಾಡಿಕೊಳ್ಳಲು ಸಾಧ್ಯ. ಸಂಪಾದನೆ ಇಲ್ಲದೆ ಒಂದು ಹೆಜ್ಜೆಯೂ ಇರಬಾರದು. ಈಗ ಇಂತಹ ಗಮನ ಇಡುವಂತಹ ಸಮಯ ಆಗಿದೆ. ಒಂದು ಹೆಜ್ಜೆಯೂ ಪದಮದ ಸಂಪಾದನೆ ಇಲ್ಲದೆ ಇರಬಾರದು. ನಿಮಿತ್ತ ಆಗಿರುವ ಗುಂಪಾಗಿದೆ. ಕಿರೀಟಧಾರಿ ಅಂತೂ ಆಗಲೇಬೇಕು. ಎಷ್ಟು ನಿಮ್ಮ ಜವಾಬ್ದಾರಿಯ ಕಿರೀಟ ಧಾರಣೆ ಮಾಡುತ್ತೀರೋ ಅಷ್ಟು ಬೇರೆಯವರ ಜವಾಬ್ದಾರಿಯ ಕಿರೀಟವನ್ನು ಧಾರಣೆ ಮಾಡಲು ಸಾಧ್ಯ. ಯಾರು ನಿಮಿತ್ತ ಟೀಚರ್ ಆಗಿದ್ದೀರೋ ನಿಮ್ಮ ಮೇಲೆ ಹೆಚ್ಚು ಎಲ್ಲರ ದೃಷ್ಟಿ ಇರುತ್ತದೆ. ಉದಾಹರಣೆಯಾಗಿ ಮುಂದೆ ನೀವು ಇರುವಿರಿ. ಆದ್ದರಿಂದ ಹೆಚ್ಚು ಜವಾಬ್ದಾರಿ ನಿಮ್ಮ ಮೇಲಿದೆ. ಅವರ ಮುಂದೆ ನೀವು ಒಂದು ದರ್ಪಣದ ರೂಪದಲ್ಲಿರುವಿರಿ. ನಿಮ್ಮ ಜ್ಞಾನದ ಸ್ಥಿತಿಯ ದರ್ಪಣದಿಂದ ತಮ್ಮ ಸ್ವರೂಪದ ಸಾಕ್ಷಾತ್ಕಾರ ಮಾಡಿಸುವ ದರ್ಪಣ ನೀವಾಗಿದ್ದೀರಿ. ಯಾವ ದರ್ಪಣ ಎಷ್ಟು ಶಕ್ತಿಶಾಲಿ ಇರುತ್ತದೆಯೋ ಅಷ್ಟು ಸಾಕ್ಷಾತ್ಕಾರ ಸ್ಪಷ್ಟ ಆಗುತ್ತದೆ. ಆಗ ಅವರ ಸ್ಮೃತಿ ಶಕ್ತಿ ಶಾಲಿಯಾಗಿರುತ್ತದೆ. ಹೀಗೆ ಪ್ರತಿಯೊಬ್ಬರೂ ದರ್ಪಣ ಆಗಬೇಕು ಯಾವುದರಲ್ಲಿ ಅವರ ತಮ್ಮ ಸಾಕ್ಷಾತ್ಕಾರವನ್ನು ಎಷ್ಟು ಸ್ಪಷ್ಟ ಮಾಡಬೇಕೆಂದರೆ ಅವರಿಗೆ ಆ ಸ್ಮೃತಿ ಎಂದೂ ಮರೆತಿರಬಾರದು. ಯಾವ ರೀತಿ ನಿಮ್ಮ ದೇಹದ ಸಾಕ್ಷಾತ್ಕಾರ ಆದ ನಂತರ ಅದನ್ನು ಮರೆಯುತ್ತೀರಾ? ದೇಹದ ಅವಿನಾಶಿ ಸ್ಮೃತಿಯಲ್ಲಿ ಇರುತ್ತೀರಿ, ಹಾಗೆ ಅವರು ಎಂದೂ

ಮರೆಯದಂತಹ ಸಾಕ್ಷಾತ್ಕಾರ ಆಗಬೇಕು. ಶಕ್ತಿಶಾಲಿ ದರ್ಪಣ ಆಗಲು ಮುಖ್ಯ ಧಾರಣೆ ಯಾವುದು? ಎಷ್ಟು ಸ್ವಯಂ ಅರ್ಪಣೆ ಆಗುತ್ತೀರೋ ಅಷ್ಟು ದರ್ಪಣ ಶಕ್ತಿಶಾಲಿ ಆಗಿರುತ್ತದೆ. ಅರ್ಪಣಮಯ ಅಂತೂ ಆಗಿರುವಿರಿ ಆದರೆ ಯಾವ ಸಂಕಲ್ಪ ಮಾಡುತ್ತೀರಿ, ಹೆಜ್ಜೆ ಇಡುತ್ತೀರಿ ಅದನ್ನು ಮೊದಲು ತಂದೆಯ ಮುಂದೆ ಅರ್ಪಣೆ ಮಾಡಿರಿ. ಯಾವ ರೀತಿ ಭೋಗ ಇಡುತ್ತೀರಿ ಆಗ ತಂದೆಯ ಮುಂದೆ ಅರ್ಪಣೆ ಮಾಡುತ್ತೀರಿ ಅಲ್ಲವೆ. ಅದರಲ್ಲಿ ಶಕ್ತಿ ತುಂಬುತ್ತದೆ. ಅದೇ ರೀತಿ ಇದೂ ಸಹ ಪ್ರತಿ ಸಂಕಲ್ಪ, ಪ್ರತಿ ಹೆಜ್ಜೆ ತಂದೆಗೆ ಅರ್ಪಣೆ ಮಾಡಿರಿ. ಏನು ಮಾಡುತ್ತೀರಿ, ಏನು ವಿಚಾರ ಮಾಡುತ್ತೀರಿ ಅದು ತಂದೆಯ ನೆನಪು ಅರ್ಥಾತ್ ತಂದೆಯ ಕರ್ತವ್ಯದ ನೆನಪು. ಎಷ್ಟು ಅರ್ಪಣೆಯ ಸಂಸ್ಕಾರ ಅಷ್ಟು ಶಕ್ತಿಶಾಲಿ ದರ್ಪಣ. ಪ್ರತಿ ಸಂಕಲ್ಪ ನಿಮಿತ್ತ ಆಗಿ ಮಾಡುತ್ತೀರಿ, ನಿಮಿತ್ತ ಆಗುವುದು ಅರ್ಥಾತ್ ಅರ್ಪಣೆ ಆಗುವುದು. ನಮ್ರಚಿತ್ತರಾಗಿರುವವರು ಬಾಗುತ್ತಾರೆ. ಎಷ್ಟು ಸಂಸ್ಕಾರದಲ್ಲಿ, ಸಂಕಲ್ಪದಲ್ಲಿ ಬಾಗುತ್ತೀರೋ ಅಷ್ಟು ವಿಶ್ವ ನಿಮ್ಮ ಮುಂದೆ ಬಾಗುತ್ತದೆ. ಬಾಗುವುದು ಅರ್ಥಾತ್ ಬಾಗಿಸುವುದು, ಸಂಸ್ಕಾರದಲ್ಲಿಯೂ ಬಾಗಬೇಕು. ಬೇರೆಯವರೂ ನಮ್ಮ ಮುಂದೆ ಸ್ವಲ್ಪ ಬಾಗಲಿ ಎನ್ನುವ ಸಂಕಲ್ಪವೂ ಬರಬಾರದು. ನಾವು ಬಾಗಿದಾಗ ಎಲ್ಲರೂ ಬಾಗುತ್ತಾರೆ. ಯಾರು ಸತ್ಯ ಸೇವಾಧಾರಿ ಆಗಿರುತ್ತಾರೋ ಅವರು ಎಲ್ಲರ ಮುಂದೆ ಬಾಗಿದಾಗ ಸೇವೆ ಮಾಡಲು ಸಧ್ಯ. ಚಿಕ್ಕವರು ಪ್ರಿಯವಾಗಿರುತ್ತಾರೆ ಆದ್ದರಿಂದ ಅವರನ್ನು ಪ್ರಿಯರು ಎಂದು ತಿಳಿದುಕೊಳ್ಳಿ, ಸರ್ವರ ಸ್ನೇಹಿ ಆಗಿರುವಿರಿ, ದೊಡ್ಡವರಿಗೆ ಹೇಳುತ್ತೀರಿ, ಚಿಕ್ಕವರು ಬಿಡಿಸಿಕೊಳ್ಳುತ್ತಾರೆ. ಆದರೆ ನಿಮ್ಮಲ್ಲಿ ಯಾವ ಕೊರತೆ ಇಟ್ಟುಕೊಳ್ಳಬೇಡಿ. ಎಲ್ಲರ ಮುಂದೆ ಹೋಗುವಂತಹ ಲಕ್ಷ್ಯ ಅವಶ್ಯ ಇಟ್ಟುಕೊಳ್ಳಿರಿ. ಮುಂದುವರೆಯುತ್ತಿದ್ದರೂ ಮುಂದುವರೆಸುವವರನ್ನು ಗೌರವಿಸುವುದನ್ನು ಬಿಡಬೇಡಿ. ಮುಂದುವರೆಸುವವರನ್ನು ಗೌರವಿಸಿದಾಗ ಅವರು ನಿಮ್ಮನ್ನು ಗೌರವದಿಂದ ಕಾಣುವರು. ನೀವು ಏನು ಮಾಡುತ್ತೀರಿ, ನಿಮ್ಮನ್ನು ನೋಡಿ ಅನ್ಯರು ಮಾಡುತ್ತಾರೆ.

ಹೆಡ್ಸ್ ಅರ್ಥಾತ್ ವಿಶಾಲ ಬುದ್ಧಿ, ಯಾವುದರಲ್ಲಿ ಲಾಭ ಇದೆ, ನಷ್ಟ ಯಾವುದರಲ್ಲಿ ಇದೆ ಎಂದು ಅವರು ಎಲ್ಲ ಕಡೆ ನೋಡುತ್ತಾರೆ. ಎಲ್ಲರೂ ವಿಶಾಲ ಬುದ್ದಿ, ತ್ರಿನೇತ್ರಿ, ತ್ರಿಕಾಲದರ್ಶಿ ಆಗಿರುವಿರಾ? ಯಾವುದೇ ಕರ್ಮ ನೋಡಿದಾಗ ಅದರ ಹಿಂದೆ ಬೀಳಬೇಕು. ಆಗ ಏಕೆ ಹೀಗಾಯಿತೊ ಗೊತ್ತಿಲ್ಲ ಎಂದು ಎಂದೂ ಹೇಳುವುದಿಲ್ಲ. ಪರಿಶೀಲನೆ ಮಾಡುವುದು ಕಡಿಮೆ ಇದ್ದಾಗ ಹೀಗೆ ಆಗುತ್ತದೆ. ತ್ರಿಕಾಲದರ್ಶಿಯ ಮಾತು ಇದಲ್ಲ, ಇಷ್ಟ ಇರಲಿಲ್ಲ ಆದರೆ ಆಯಿತು. ಮಾಸ್ಟರ್ ಸರ್ವ ಶಕ್ತಿವಂತರು ಇಷ್ಟ ಪಡದಿದ್ದರೆ ಅದು ಆಗಲು ಸಾಧ್ಯವಿದೆಯೇ? ಈಗ ಈ ಭಾಷೆಯನ್ನು ಸಮಾಪ್ತಿ ಮಾಡಿರಿ. ಶಕ್ತಿಯರಾಗಿರುವಿರಿ ಅಲ್ಲವೆ! ಶಕ್ತಿಯರ ಕರ್ಮ ಮತ್ತು ಸಂಕಲ್ಪ ಸಮಾನ ಆಗಿರುತ್ತದೆ. ಸಂಕಲ್ಪ ಒಂದು ಮತ್ತು ಕರ್ಮ ಇನ್ನೊಂದು ಇದು ಕೊರತೆಯಾಗಿದೆ. ಒಳ್ಳೆಯದು.

ಅವ್ಯಕ್ತ ಮುರಳಿ 11-07-1971.

***ವಿಶ್ವಕಲ್ಯಾಣಕಾರಿಯಾಗಲು ಮುಖ್ಯ ದಾರಣೆಗಳು***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಸುಖ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ನನ್ನ ದೃಷ್ಟಿ, ವೃತ್ತಿ, ಸ್ಮೃತಿಯಿಂದ ವಿಶ್ವ ಪರಿವರ್ತನೆಗೆ ನಿಮಿತ್ತವಾದ ವಿಶ್ವಕಲ್ಯಾಣಕಾರಿ.

2. ನಾನು ಈಶ್ವರೀಯ ನಶೆ ಮತ್ತು ದಯೆ ಎರಡೂ ಗುಣಗಳನ್ನು ಸಮಾನವಾಗಿ ಧಾರಣೆ ಮಾಡಿ, ಆತ್ಮಿಕ ಸ್ಥಿತಿಯಲ್ಲಿ ಇರುತ್ತಾ ಸ್ವಉನ್ನತಿ ಮತ್ತು ಇತರರ ಉನ್ನತಿಯನ್ನು ಮಾಡಿದ್ದೇನೆ.

3. ನಾನು ಸ್ವಮಾನದಲ್ಲಿ ಸ್ಥಿತವಾಗಿ ಸಫಲತೆಯನ್ನು ಹೊಂದಿರುವ ಚೈತನ್ಯ ಸ್ವರೂಪ.

4. ನಾನು ಪ್ರತಿಯೊಂದು ಸಂಕಲ್ಪವನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಜ್ಞಾನದ ಶಕ್ತಿಯೊಂದಿಗೆ ಕಾರಣವನ್ನು ನಿವಾರಣೆಯಲ್ಲಿ ಪರಿವರ್ತನೆ ಮಾಡಿಕೊಂಡಿರುವ ಜ್ಞಾನ ಸಾಗರನು ಮತ್ತು ಸಫಲತಾ ಮೂರ್ತಿ.

5. ನಾನು ಸಂಕಲ್ಪ, ವಾಣಿ ಮತ್ತು ಕರ್ಮದ ಮೇಲೆ ವಿಶೇಷ ಗಮನವಿಟ್ಟು ತಂದೆಯ ಮೇಲೆ 100% ನಿಶ್ಚಯ & ಸ್ವಯಂನ ಮೇಲೆ ಕೂಡ ಪೂರ್ತಿ ನಿಶ್ಚಯವನ್ನು ಇಟ್ಟಿರುವ ನಿಶ್ಚಯ ಬುದ್ಧಿ ಸ್ವರೂಪ.

6. ನನ್ನ ದೃಷ್ಟಿಯಿಂದ ಮತ್ತು ವೃತ್ತಿಯಿಂದ ನನ್ನ ಎದುರಿಗೆ ಯಾರು ಬಂದರೂ ಅವರ ಪ್ರತಿ ಕಲ್ಯಾಣ ಭಾವನೆ ಮತ್ತು ದಯಾ ಭಾವನೆಯೊಂದಿಗೆ ಅವರ ಸಂಸ್ಕಾರಗಳನ್ನು ಪರಿವರ್ತನೆ ಮಾಡಿದ್ದೇನೆ.

7. ನಾನು ನನ್ನ ಪ್ರತಿಯೊಂದು ಮಾತಿನಲ್ಲಿ, ಕರ್ಮದಲ್ಲಿ, ಹೆಜ್ಜೆಯಲ್ಲಿ, ಕೋಟಿಗೆ ಕೋಟಿ ಸಂಪಾದನೆಯನ್ನು ಜಮಾ ಮಾಡಿಕೊಂಡಿರುವ ಪದಮಾಪದಂ ಭಾಗ್ಯಶಾಲಿಯಾಗಿದ್ದೇನೆ.

8. ನಾನು ಸ್ವಯಂ ಜವಾಬ್ದಾರಿಯ ಕಿರೀಟವನ್ನು ಧಾರಣೆ ಮಾಡಿ ಇತರರನ್ನು ಜವಾಬ್ದಾರಿಯ ಕಿರೀಟವನ್ನು ಧಾರಣೆ ಮಾಡುವ ಹಾಗೆ ಮಾಡಿದ್ದೇನೆ.

9. ನನ್ನ ಜ್ಞಾನಯುಕ್ತ ಸ್ಥಿತಿ ಎಂಬ ದರ್ಪಣದಿಂದ ಸ್ವ ಸ್ವರೂಪವನ್ನು ಮತ್ತು ನನ್ನ ಎದುರಿಗೆ ಯಾರು ಬಂದರೂ ಪ್ರತಿಯೊಬ್ಬರ ಸ್ಪಷ್ಟ ಸಾಕ್ಷಾತ್ಕಾರವನ್ನು ಮಾಡಿಸಿರುವ ಸಾಕ್ಷಾತ್ಕಾರ ಮೂರ್ತಿ.

10. ನಾನು ಪ್ರತಿಯೊಂದು ಸಂಕಲ್ಪ, ಹೆಜ್ಜೆ, ಏನನ್ನು ನೋಡಿದರೂ, ಯಾವುದನ್ನು ಯೋಚಿಸಿದರೂ, ಎಲ್ಲಾ ತಂದೆಗೆ ಅರ್ಪಣೆ ಮಾಡಿ ಶಕ್ತಿಶಾಲಿ ದರ್ಪಣದಂತೆ ತಯಾರಾಗಿದ್ದೇನೆ.

11. ನಾನು ಸಂಸ್ಕಾರಗಳಿಂದ ಬಾಗಿ ಎಲ್ಲರನ್ನೂ ಬಾಗುವಹಾಗೆ ಮಾಡಿಕೊಂಡಿರುವ ನಮ್ರಚಿತ್ತ ಸ್ವರೂಪ.

12. ನಾನು ಕರ್ಮ ಮತ್ತು ಸಂಕಲ್ಪ ಎರಡನ್ನೂ ಸಮಾನವಾಗಿ ಇಟ್ಟಿರುವ ಶಕ್ತಿ ಸ್ವರೂಪ.